**ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ**

**ನಂ.9/2, 6&7ನೇ ಮಹಡಿ, ಮಹಾಲಕ್ಷ್ಮಿ ಚೇಂಬರ್ಸ್, ಎಂ.ಜಿ.ರಸ್ತೆ, ಬೆಂಗಳೂರು-560 001**

**ಅಧಿಸೂಚನೆ**

ಸಂಖ್ಯೆ: ಕವಿನಿಆ/ಎನ್/48/16, ದಿನಾಂಕ: 19.08.2016

**ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ(ಶುಲ್ಕ) ವಿನಿಯಮಗಳು, 2016**

**ಪೀಠಿಕೆ:**

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು (ಕ.ವಿ.ನಿ.ಆ.), ಕರಡು ಕವಿನಿಆ (ಶುಲ್ಕ) ವಿನಿಯಮಗಳು, 2016ನ್ನು ಹೊರಡಿಸಿ ಭಾಗೀದಾರರಿಂದ ಮತ್ತು ಬಾಧಿತ ವ್ಯಕ್ತಿಗಳಿಂದ ಅಭಿಪ್ರಾಯಗಳು/ಸಲಹೆಗಳು/ಆಕ್ಷೇಪಣೆಗಳನ್ನು ಆಹ್ವಾನಿಸಿತ್ತು. ಆಯೋಗವು, ದಿನಾಂಕ:27.07.2016ರಂದು ಸಾರ್ವಜನಿಕ ವಿಚಾರಣೆಯನ್ನೂ ಸಹ ನಡೆಸಿತ್ತು. ಆಯೋಗವು, ಈ ವಿಷಯದಲ್ಲಿ, ಭಾಗೀದಾರರ ಹಾಗೂ ಸಾರ್ವಜನಿಕರ ಅಭಿಪ್ರಾಯಗಳನ್ನು ಪರಿಗಣಿಸಿದ ನಂತರ, ವಿದ್ಯುಚ್ಛಕ್ತಿ ಅಧಿನಿಯಮ 2003ರ (2003ರ 36ನೇ ಕೇಂದ್ರ ಅಧಿನಿಯಮ) ಪ್ರಕರಣ 86(1) (ಜೆ)ರ ಜೊತೆಗೆ ಓದಲಾದ ಪ್ರಕರಣ 181(2) (ಝಡ್‌ಪಿ)ರಡಿಯಲ್ಲಿ ತನಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಈ ಮುಂದಿನಂತೆ ವಿನಿಯಮಗಳನ್ನು ಮಾಡುತ್ತದೆ.

**ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಶುಲ್ಕ) ವಿನಿಯಮಗಳು, 2016**

**1. ಸಂಕ್ಷಿಪ್ತ ಶೀರ್ಷಿಕೆ ಮತ್ತು ಪ್ರಾರಂಭ.-**

(i) ಈ ವಿನಿಯಮಗಳನ್ನು "ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಶುಲ್ಕ) ವಿನಿಯಮಗಳು, 2016" ಎಂದು ಕರೆಯಬಹುದಾಗಿದೆ.

(ii) ಅವು ಕರ್ನಾಟಕ ರಾಜ್ಯದ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

(iii) ಅವು ಇಡೀ ಕರ್ನಾಟಕ ರಾಜ್ಯಾದ್ಯಂತ ವ್ಯಾಪ್ತವಾಗುತ್ತವೆ.

**2. ಪರಿಭಾಷೆಗಳು.-**

ಈ ವಿನಿಯಮಗಳಲ್ಲಿ ಬಳಸಿದ ಪದಗಳು ಮತ್ತು ವ್ಯಾಖ್ಯಾನಗಳು ವಿದ್ಯುಚ್ಛಕ್ತಿ ಅಧಿನಿಯಮ 2003ರಲ್ಲಿ (ಸಂಕ್ಷಿಪ್ತವಾಗಿ ಅಧಿನಿಯಮ) ಅಥವಾ ಆಯೋಗವು ಹೊರಡಿಸಿರುವ ಬೇರೆ ವಿನಿಯಮಗಳಲ್ಲಿ ಅಥವಾ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಅಡಿಯಲ್ಲಿ ಅವುಗಳಿಗೆ ಗೊತ್ತುಪಡಿಸಿದ ಅದೇ ಅರ್ಥಗಳೇ ಇರತಕ್ಕದ್ದು.

**3. ಶುಲ್ಕ.-**

(i) (ಎ) ಆಯೋಗಕ್ಕೆ ಪ್ರತಿ ಮನವಿ, ಅರ್ಜಿ, ದೂರನ್ನು ಸಲ್ಲಿಸುವಾಗ ಈ ವಿನಿಯಮಗಳಲ್ಲಿ ಅನುಸೂಚಿಸಲಾಗಿರುವ ನಿಗದಿಪಡಿಸಿದ ಶುಲ್ಕ ಪಾವತಿಸತಕ್ಕದ್ದು. ಹಲವಾರು ಕಾನೂನಿನ ಸಾಮಾನ್ಯ ಪ್ರಶ್ನೆಗಳು ಮತ್ತು ಸಂಗತಿಗಳು ಒಳಗೊಂಡಿರುವ ವಿವಾದದ ವಸ್ತುವಿಷಯದಲ್ಲಿ ಸಮಾನ ಆದರೆ, ಪ್ರತ್ಯೇಕ ಹಾಗೂ ವಿಶಿಷ್ಟವಾದ ಹಿತಾಸಕ್ತಿ ಅಥವಾ ವ್ಯಾಜ್ಯಕಾರಣ ಹೊಂದಿರುವ ಹಲವಾರು ವ್ಯಕ್ತಿಗಳು ಆಯೋಗಕ್ಕೆ ಸಾಮಾನ್ಯ ಮನವಿ ಸಲ್ಲಿಸಬಹುದು. ಆದರೆ, ಪ್ರತಿ ಅರ್ಜಿದಾರ ಪ್ರತ್ಯೇಕ ಶುಲ್ಕ ಪಾವತಿಸತಕ್ಕದ್ದು.

(ಬಿ) ಅಧಿನಿಯಮದ ಪ್ರಕರಣ 14ರಡಿಯಲ್ಲಿ ಲೈಸೆನ್ಸು ಪಡೆಯಲು ಅಥವಾ ಲೈಸೆನ್ಸಿಗೆ ವಿನಾಯಿತಿ ಮಂಜೂರಾತಿ ಕೋರಿ ಸಲ್ಲಿಸುವ ಪ್ರತಿ ಅರ್ಜಿಯನ್ನು, ರಾಜ್ಯ ಸರ್ಕಾರವು ಅಧಿನಿಯಮದ ಪ್ರಕರಣ 15ರ ಹಾಗೂ ಜೊತೆಗೆ ಓದಲಾದ ಪ್ರಕರಣ 180(2)(ಎ)ರಲ್ಲಿ ನಿಗದಿಸಿರುವ ಅಂಥ ಶುಲ್ಕದೊಂದಿಗೆ ಸಲ್ಲಿಸತಕ್ಕದ್ದು.

ಪರಂತು, ರಾಜ್ಯ ಸರ್ಕಾರವು ಶುಲ್ಕ ನಿಗದಿಪಡಿಸುವವರೆಗೆ, ಲೈಸೆನ್ಸು ಪಡೆಯಲು ಅಥವಾ ಲೈಸೆನ್ಸಿಗೆ ವಿನಾಯಿತಿ ಮಂಜೂರಾತಿ ಕೋರಿದ ಅರ್ಜಿಯೊಂದಿಗೆ 25,000/- ರೂಪಾಯಿಗಳ ಪ್ರಕ್ರಿಯೆ ಶುಲ್ಕ ಇರತಕ್ಕದ್ದು.

(ii) ಪ್ರತಿ ಲೈಸೆನ್ಸುದಾರನು ಈ ವಿನಿಯಮಗಳಲ್ಲಿ ಅನುಸೂಚಿಸಿದ ವಾರ್ಷಿಕ ಪರವಾನಿಗೆ ಶುಲ್ಕವನ್ನು ಕವಿನಿಆ (ಲೈಸೆನ್ಸು ನೀಡಿಕೆ) ವಿನಿಯಮಗಳು 2004ರಲ್ಲಿ ಅನುಸೂಚಿಸಿದ ಕಾಲಮಿತಿಯೊಳಗೆ ಪಾವತಿಸತಕ್ಕದ್ದು.

(ಎ) ಈ ವಿನಿಯಮಗಳ ಅಡಿಯಲ್ಲಿ ಅನುಸೂಚಿಸಿದಂತೆ, ಆಯೋಗಕ್ಕೆ ಪಾವತಿಸತಕ್ಕ ಶುಲ್ಕವನ್ನು ಬ್ಯಾಂಕ್ ಡ್ರಾಫ್ಟ್ ಅಥವಾ ಬ್ಯಾಂಕರ್ ಚೆಕ್ ಮೂಲಕ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಕಾರ್ಯದರ್ಶಿಯವರ ಹೆಸರಿನಲ್ಲಿ ಬೆಂಗಳೂರಿನಲ್ಲಿ ಸಂದಾಯವಾಗುವಂತೆ ಪಾವತಿಸತಕ್ಕದ್ದು.

(ಬಿ) ರೂ.5,000/-ಕ್ಕೆ ಮೀರದ ಮೊತ್ತವನ್ನು ಆಯೋಗವು ನಗದಾಗಿ ಸ್ವೀಕರಿಸಬಹುದು.

(ಸಿ) ರೂ. 25,000/-ಕ್ಕಿಂತ ಮೇಲ್ಪಟ್ಟ ಶುಲ್ಕದ ಮೊತ್ತವನ್ನು ನೈಜ ಸಮಯದ ಒಟ್ಟು ಇತ್ಯರ್ಥ (ಆರ್‌ಟಿಜಿಎಸ್) ಅಥವಾ ರಾಷ್ಟ್ರೀಯ ವಿದ್ಯುನ್ಮಾನ ನಿಧಿ ವರ್ಗಾವಣೆ (ಎನ್‌ಇಎಫ್‌ಟಿ) ಮೂಲಕ ಪಾವತಿಸಬಹುದು ಮತ್ತು ಆರ್‌ಟಿಜಿಎಸ್ / ಎನ್‌ಇಎಫ್‌ಟಿ ಮುಖಾಂತರ ಸಂದಾಯ ಮಾಡಲಾಗುವ ಶುಲ್ಕ ಪಾವತಿಯ ವಿವರಗಳನ್ನು ಈ ವಿನಿಯಮಗಳಿಗೆ ಅನುಬಂಧಿಸಿರುವ ನಮೂನೆ-1ರ ಪ್ರಕಾರ ಸಲ್ಲಿಸತಕ್ಕದ್ದು.

(iii) ಈ ವಿನಿಯಮಗಳಡಿಯಲ್ಲಿ, ಆಯೋಗವು, ಸೂಕ್ತ ಪ್ರಕರಣಗಳಲ್ಲಿ ಲಿಖಿತ ಆದೇಶದ ಮೂಲಕ ಶುಲ್ಕ ಪಾವತಿಯ ಮೊತ್ತವನ್ನು ಮನ್ನಾ ಅಥವಾ ಕಡಿಮೆಗೊಳಿಸಬಹುದಾಗಿದೆ.

(iv) ಯಾವುದೇ ವಿವಾದ ವಿಚಾರಣೆ ಅಥವಾ ಪರಿಣಾಮಕಾರಿ ವಾದಗಳು ಪ್ರಾರಂಭವಾಗುವ ಮುನ್ನ ಅಥವಾ ಅರ್ಜಿ ಸ್ವೀಕಾರವಾಗುವ ಮುನ್ನ, ಪಕ್ಷಗಾರರ ಮಧ್ಯೆ ವಿವಾದ ಇತ್ಯರ್ಥವಾದಲ್ಲಿ, ಅಥವಾ ಅರ್ಜಿದಾರ / ಅರ್ಜಿದಾರರಿಂದ ಅರ್ಜಿಯು ಹಿಂತೆಗೆಯಲ್ಪಟ್ಟಾಗ, ಶುಲ್ಕ ಪಾವತಿಸಿದ ಅರ್ಜಿದಾರ / ಅರ್ಜಿದಾರರಿಗೆ ಶುಲ್ಕದ ಶೇಕಡಾ ಐವತ್ತರಷ್ಟು ಮರುಪಾವತಿಸುವಂತೆ ಆದೇಶವಾಗತಕ್ಕದ್ದು.

4. **ಅರ್ಜಿ / ಮನವಿಗಾಗಿ ಶುಲ್ಕ, ವಾರ್ಷಿಕ ಪರವಾನಿಗೆ ಶುಲ್ಕ ಇತ್ಯಾದಿ.-**

ಆಯೋಗದ ಮುಂದೆ, ಅರ್ಜಿ/ ಮನವಿಯೊಂದಿಗೆ ಪಾವತಿಸಬೇಕಾದ ಶುಲ್ಕ ಮತ್ತು ಪರವಾನಿಗೆದಾರರು ಪಾವತಿಸಬೇಕಾದ ವಾರ್ಷಿಕ ಪರವಾನಿಗೆ ಶುಲ್ಕ ಈ ಮುಂದಿನಂತಿರತಕ್ಕದ್ದು:

| ಕ್ರ. ಸ. | ವಿವರಗಳು | ಶುಲ್ಕದ ಮೊತ್ತ |
|---|---|---|
| 1 | ವಾರ್ಷಿಕ ಪರವಾನಿಗೆ ಶುಲ್ಕ:<br>(i) ಪ್ರಸರಣ ಲೈಸೆನ್ಸುದಾರ<br>(ii) ಗ್ರಾಮೀಣ ವಿದ್ಯುತ್ ಸಹಕಾರ ಸಂಘಗಳು ಹಾಗೂ ಎಸ್‌ಇಝೆಡ್ ಹೊರತುಪಡಿಸಿ ವಿದ್ಯುತ್ ವಿತರಣಾ ಲೈಸೆನ್ಸುದಾರ<br>(iii) ಗ್ರಾಮೀಣ ವಿದ್ಯುತ್ ಸಹಕಾರ ಸಂಘ ಆದ ವಿದ್ಯುತ್ ವಿತರಣಾ ಲೈಸೆನ್ಸುದಾರ<br>(iv) ವಿಶೇಷ ಆರ್ಥಿಕ ವಲಯ (ಎಸ್‌ಇಝೆಡ್)<br>(v) ವಿದ್ಯುಚ್ಛಕ್ತಿ ವ್ಯಾಪಾರಿ | (i) ಪ್ರತಿ ವರ್ಷಕ್ಕೆ 10 ಲಕ್ಷ ರೂಪಾಯಿಗಳು<br>(ii) ಪ್ರತಿ ವರ್ಷಕ್ಕೆ 10 ಲಕ್ಷ ರೂಪಾಯಿಗಳು<br>(iii) ಪ್ರತಿ ವರ್ಷಕ್ಕೆ 1,50,000/- ರೂಪಾಯಿಗಳು.<br>(iv) ಪ್ರತಿ ವರ್ಷಕ್ಕೆ 1,50,000/- ರೂಪಾಯಿಗಳು.<br>(v) ಕವಿನಿಆ (ವಿದ್ಯುಚ್ಛಕ್ತಿ ವ್ಯಾಪಾರಿಯ ಅರ್ಹ ಷರತ್ತುಗಳು ಮತ್ತು ಕರ್ತವ್ಯಗಳು) ವಿನಿಯಮಗಳು 2004ರಲ್ಲಿ ಅನುಸೂಚಿಸಿದಂತೆ. |
| 2 | (ಎ) ಉತ್ಪಾದನಾ ಕಂಪನಿಗಳಿಗೆ ಸಂಬಂಧಿಸಿದಂತೆ ವಿದ್ಯುತ್ ದರ ನಿರ್ಧರಣೆಗಾಗಿ ಅರ್ಜಿ<br>(i) ಸಾಂಪ್ರದಾಯಿಕ ಇಂಧನ ಮೂಲದ ಘಟಕ | (i) ಸ್ಥಾಪಿತ ಸಾಮರ್ಥ್ಯದ ಪ್ರತಿ ಮೆ.ವ್ಯಾ.ಗೆ ಅಥವಾ ಅದರ ಭಾಗಕ್ಕೆ 5,000/- ರೂಪಾಯಿಗಳು |

| | | |
|---|---|---|
| | (ii) ಸಹ–ಉತ್ಪಾದನೆ ಸೇರಿದಂತೆ ಅಸಂಪ್ರದಾಯಿಕ ಮತ್ತು ನವೀಕರಿಸಬಹುದಾದ ಇಂಧನ ಮೂಲಗಳು.<br><br>(ಬಿ)ಸ್ಪರ್ಧಾತ್ಮಕ ಬಿಡ್ಡಿಂಗ್ ಮೂಲಕ ಅಲ್ಪಾವಧಿ / ಮಧ್ಯಮಾವಧಿ / ದೀರ್ಘಾವಧಿಗೆ ಖರೀದಿಸುವ ವಿದ್ಯುತ್‌ಗೆ ದರ ಅಳವಡಿಸಿಕೆಗಾಗಿ ಅರ್ಜಿ. | (ii) ಪ್ರತಿ ಅರ್ಜಿಗೆ 10,000/– ರೂಪಾಯಿಗಳ ಕನಿಷ್ಟ ಮಿತಿಗೊಳಪಟ್ಟು ಸ್ಥಾಪಿತ ಸಾಮರ್ಥ್ಯದ ಪ್ರತಿ ಮೆ.ವ್ಯಾ.ಗೆ ಅಥವಾ ಅದರ ಭಾಗಕ್ಕೆ 2,000/– ರೂಪಾಯಿಗಳು.<br><br>(ಬಿ) ಒಪ್ಪಂದ ಸಾಮರ್ಥ್ಯದ ಪ್ರತಿ ಮೆ.ವ್ಯಾ.ಗೆ ಅಥವಾ ಅದರ ಭಾಗಕ್ಕೆ ಪ್ರತಿ ವರ್ಷ 250/– ರೂಪಾಯಿಗಳು. |
| 3 | ಈ ಕೆಳಗಿನವುಗಳಿಗೆ ಸಂಬಂಧಿಸಿದಂತೆ, ಪಿಪಿಎ, ಯಾವುದಾದರೂ ಇದ್ದಲ್ಲಿ, ಅದರ ಅನುಮೋದನೆ ಒಳಗೊಂಡು ವಿದ್ಯುತ್ ಖರೀದಿ / ಪಡೆಯುವಿಕೆಯ ಅನುಮೋದನೆಗೆ ಪ್ರಕ್ರಿಯೆ ಶುಲ್ಕ:<br><br>(i) ಸಾಂಪ್ರದಾಯಿಕ ಇಂಧನ ಆಧಾರಿತ ಘಟಕ<br><br>(ii) ಸಹ–ಉತ್ಪಾದನೆ ಸೇರಿದಂತೆ ಅಸಂಪ್ರದಾಯಿಕ ಮತ್ತು ನವೀಕರಿಸಬಹುದಾದ ಇಂಧನ ಮೂಲಗಳು. | (i) ಒಪ್ಪಂದ ಸಾಮರ್ಥ್ಯದ ಪ್ರತಿ ಮೆ.ವ್ಯಾ.ಗೆ ಅಥವಾ ಅದರ ಭಾಗಕ್ಕೆ 5,000/– ರೂಪಾಯಿಗಳು.<br>ii) ಒಪ್ಪಂದ ಸಾಮರ್ಥ್ಯದ ಪ್ರತಿ ಮೆ.ವ್ಯಾ.ಗೆ ಅಥವಾ ಅದರ ಭಾಗಕ್ಕೆ 5,000/– ರೂಪಾಯಿಗಳು.<br><br>**ಟಿಪ್ಪಣಿ:** ಅಧಿನಿಯಮದ ಪ್ರಕರಣ 63ರ ಅಡಿಯಲ್ಲಿ ವಿದ್ಯುತ್ ದರ ಅಳವಡಿಸಿಕೊಂಡಲ್ಲಿ, ಪಿಪಿಎ ಅನುಮೋದನೆಗಾಗಿ ಯಾವುದೇ ಪ್ರಕ್ರಿಯೆ ಶುಲ್ಕ ಪಾವತಿಸತಕ್ಕದ್ದಲ್ಲ. |
| 4 | ಎಆರ್‌ಆರ್ / ಪ್ರಸರಣಾ ವಿದ್ಯುತ್‌ದರ ನಿರ್ಧರಣೆ ಅನುಮೋದನೆಗಾಗಿ ಅರ್ಜಿ | ಆಯೋಗದಿಂದ ದರ ನಿರ್ಧಾರಿತವಾಗಬೇಕಾದ ವರ್ಷದಲ್ಲಿನ ನಿರೀಕ್ಷಿತ ಆದಾಯ ಸ್ವೀಕಾರದ ಶೇಕಡಾ 0.02ರಷ್ಟು. |
| 5 | ಎಆರ್‌ಆರ್ / ವಿತರಣೆ ಮತ್ತು ವಿದ್ಯುತ್ ಚಿಲ್ಲರೆ ಮಾರಾಟಕ್ಕೆ ದರ ನಿರ್ಧರಣೆಗಾಗಿ ಅರ್ಜಿ | ಆಯೋಗದಿಂದ ದರ ನಿರ್ಧಾರಿತವಾಗಬೇಕಾದ ವರ್ಷದಲ್ಲಿನ ನಿರೀಕ್ಷಿತ ಆದಾಯ ಸ್ವೀಕಾರದ ಶೇಕಡಾ 0.02ರಷ್ಟು. |
| 6 | ಅಧಿನಿಯಮದ ಪ್ರಕರಣ 11 ಅಥವಾ 11(2)ರ ಅಡಿಯಲ್ಲಿ ಅರ್ಜಿ | 25,000/– ರೂಪಾಯಿಗಳು. |
| 7 | ಕಾಲಕಾಲಕ್ಕೆ ತಿದ್ದುಪಡಿಯಾದ ಕವಿನಿಆ (ಇಂಧನ ವೆಚ್ಚ ಹೊಂದಾಣಿಕೆ ಶುಲ್ಕಗಳು)ವಿನಿಯಮಗಳು 2013ರ ಪ್ರಕಾರ ಇಂಧನ ಹೊಂದಾಣಿಕೆ ಶುಲ್ಕಗಳ ನಿರ್ಧರಣೆಗಾಗಿ ಅರ್ಜಿ | 15,000/– ರೂಪಾಯಿಗಳು. |
| 8 | ದರ ಆದೇಶ ಹೊರತುಪಡಿಸಿ ಆಯೋಗದ ಆದೇಶದ ಪುನರ್ ಪರಿಶೀಲನೆಗಾಗಿ ಅರ್ಜಿ | ಲೈಸೆನ್ಸುದಾರರು ಮತ್ತು ಉತ್ಪಾದನಾ ಕಂಪನಿಗಳಿಗೆ 15,000/– ರೂಪಾಯಿಗಳು, ಇತರರಿಗೆ 5,000/– ರೂಪಾಯಿಗಳು. |
| 9 | ಆಯೋಗದ ದರ ಆದೇಶಗಳ ಪುನರ್ ಪರಿಶೀಲನೆಗಾಗಿ ಅರ್ಜಿ | ಲೈಸೆನ್ಸುದಾರರು ಮತ್ತು ಉತ್ಪಾದನಾ ಕಂಪನಿಗಳಿಗೆ 25,000/– ರೂಪಾಯಿಗಳು, ಇತರರಿಗೆ 5,000/– ರೂಪಾಯಿಗಳು. |
| 10 | ಆಯೋಗದ ದಾಖಲೆಗಳ ತಪಾಸಣೆ | ಪ್ರತಿ ದಿನಕ್ಕೆ 200/– ರೂಪಾಯಿಗಳು |
| 11 | ಆಯೋಗದ ದಸ್ತಾವೇಜುಗಳ/ಆದೇಶಗಳ ದೃಢೀಕೃತ ಪ್ರತಿಗಳನ್ನು ಒದಗಿಸುವಿಕೆ | ಪ್ರತಿ ಪುಟಕ್ಕೆ 2/– ರೂಪಾಯಿಗಳು |
| 12 | ಅಧಿನಿಯಮದ ಪ್ರಕರಣ 142ರ ಅಡಿಯಲ್ಲಿ ಅರ್ಜಿ | 1000/– ರೂಪಾಯಿಗಳು |
| 13 | ಅಧಿನಿಯಮದ ಅಡಿಯಲ್ಲಿ ವಿವಾದಗಳ ನ್ಯಾಯ ನಿರ್ಣಯಕ್ಕಾಗಿ ಅರ್ಜಿ | ವಿತ್ತೀಯ ಕ್ಲೈಮು ಒಳಗೊಂಡ ವಿವಾದಗಳು – 25,000/– ರೂಪಾಯಿಗಳ ಕನಿಷ್ಟ ಮಿತಿಗೊಳಪಟ್ಟು, ವಿತ್ತೀಯ ಕ್ಲೈಮಿನ ಶೇ 0.5ರಷ್ಟು.<br>ಇತರೆ ಪ್ರಕರಣಗಳಲ್ಲಿ – 25,000/– ರೂಪಾಯಿಗಳು |
| 14 | ಆಯೋಗದ ಆದೇಶ ಕೋರಿ ಸಲ್ಲಿಕೆಯಾಗುವ, ಮೇಲೆ ಸೇರಿರದ ಅರ್ಜಿ | 5,000/– ರೂಪಾಯಿಗಳು |

**ಟಿಪ್ಪಣಿ:** ಆಯೋಗವು, ದರ ನಿರ್ಧರಣೆಗಾಗಿ, ಒಂದು ವೇಳೆ ಸ್ವಯಂಪ್ರೇರಿತ ನಡವಳಿಗಳನ್ನು ಆರಂಭಿಸಿದಲ್ಲಿ, ಸಂಬಂಧಿಸಿದ ಪರವಾನಿಗೆದಾರರು ಮೇಲಿನ ಕ್ರಮ ಸಂಖ್ಯೆ: 4 ಮತ್ತು 5ರಲ್ಲಿನ ಶುಲ್ಕ ಪಾವತಿಸತಕ್ಕದ್ದು.

5. **ತಿದ್ದುಪಡಿ ಅಧಿಕಾರ.-**

ಆಯೋಗವು ಅಗತ್ಯವಾದ ವ್ಯವಹರಣೆಗಳನ್ನು ಅನುಸರಿಸಿದ ನಂತರ, ಕಾಲಕಾಲಕ್ಕೆ ಈ ವಿನಿಯಮಗಳ ಯಾವುದೇ ಉಪಬಂಧಕ್ಕೆ ಸೇರ್ಪಡೆ, ಮಾರ್ಪಾಡು, ವ್ಯತ್ಯಾಸಗೊಳಿಸುವ, ಬದಲಾವಣೆ ಅಥವಾ ತಿದ್ದುಪಡಿ ಮಾಡಬಹುದಾಗಿದೆ.

6. **ರದ್ದುಗೊಳಿಸುವಿಕೆ.-**

(1) ಕಾಲಕಾಲಕ್ಕೆ ತಿದ್ದುಪಡಿಯಾದ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಶುಲ್ಕ) ವಿನಿಯಮಗಳು 2004 ಅನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಅಂಥ ನಿರಸನ ಆದರೂ ಸಹ, ನಿರಸನ ಮಾಡಿದ ವಿನಿಯಮಗಳಡಿಯಲ್ಲಿ ಏನೇ ಮಾಡಿದ್ದರೂ ಅಥವಾ ಯಾವುದೇ ಕ್ರಮ ಕೈಗೊಂಡಿದ್ದರೂ ಈ ವಿನಿಯಮಗಳಡಿಯಲ್ಲಿ ಅವುಗಳನ್ನು ಮಾಡಲಾಗಿದೆ ಅಥವಾ ಕ್ರಮ ಕೈಗೊಳ್ಳಲಾಗಿದೆ ಎಂದು ಪರಿಭಾವಿಸತಕ್ಕದ್ದು.

7. **ತೊಡಕುಗಳನ್ನು ನಿವಾರಿಸುವ ಅಧಿಕಾರ.-**

ಈ ವಿನಿಯಮಗಳ ಉಪಬಂಧಗಳನ್ನು ಜಾರಿಗೆ ತರುವಲ್ಲಿ ತೊಂದರೆ ಎದುರಾದಲ್ಲಿ ಆಯೋಗವು, ಅದನ್ನು ತೊಡೆದು ಹಾಕಲು ಅರ್ಹ ಮತ್ತು ಅಗತ್ಯವೆಂದು ಪರಿಗಣಿಸಿ, ಅಂತಹ ಉಪಬಂಧಗಳಿಗೆ ಅಧಿನಿಯಮಕ್ಕೆ ಅಸಂಗತವಾಗದಂತೆ, ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಸೂಕ್ತ ಆದೇಶಗಳನ್ನು ಮಾಡಬಹುದು.

*ಆಯೋಗದ ಆದೇಶದ ಮೇರೆಗೆ*

*ಡಾ॥ ಸಿದ್ದರಾಮಯ್ಯ*
*ಕಾರ್ಯದರ್ಶಿ*
*ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ*
*ಬೆಂಗಳೂರು*

---

**ನಮೂನೆ-1**

| ವಿವರಗಳು: |
|---|
| 1. ಮನವಿದಾರನ / ಅರ್ಜಿದಾರನ ಹೆಸರು: |
| 2. ಮನವಿದಾರನ / ಅರ್ಜಿದಾರನ ವಿಳಾಸ: |
| 3. ಮನವಿಯ / ಅರ್ಜಿಯ ವಸ್ತು ವಿಷಯ: |
| 4. ಮನವಿ ಸಂಖ್ಯೆ, ಯಾವುದಾದರೂ ಇದ್ದಲ್ಲಿ: |
| 5. ಪಾವತಿಸಿದ ಶುಲ್ಕ ವಿವರಗಳು: |
| (ಎ) ಅನನ್ಯ ವ್ಯವಹಾರ ಉಲ್ಲೇಖ ಸಂಖ್ಯೆ (ಯುಟಿಆರ್ ಸಂ.): |
| (ಬಿ) ಪಾವತಿಸಿದ ದಿನಾಂಕ: |
| (ಸಿ) ಪಾವತಿಸಿದ ಮೊತ್ತ: |

ಅಧಿಕೃತ ಸಹಿದಾರನ ಸಹಿ ದಿನಾಂಕದೊಡನೆ